ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು– 560001**

ಸಂಖ್ಯೆ:ಸಿ7[2] ಪ್ರಾಶಿಅ/ಕ.ಸ್ಕೂ.ಕ್ಯಾ.ನಿ/56/2019–20 ದಿನಾಂಕ: 26–07–2019

**: : ಸುತ್ತೋಲೆ : :**

ವಿಷಯ : ಕರ್ನಾಟಕ ಸ್ಕೂಲ್ ಕ್ಯಾಬ್ ನಿಯಮಗಳ ಬಗ್ಗೆ.

ಉಲ್ಲೇಖ: 1. ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಸಾರಿಗೆ ಆಯುಕ್ತರ ಕಛೇರಿ, 1ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ, ಕೆ.ಎಚ್.ರಸ್ತೆ, ಶಾಂತಿನಗರ, ಬೆಂಗಳೂರು ಈ ಕಛೇರಿ ಪತ್ರದ ಸಂಖ್ಯೆ: ಸಾಆ/ ಪ್ರವರ್ತನ–3/ ವೈವ–75/19–20, ದಿನಾಂಕ:02–07–2019.

2. ಸರ್ಕಾರದ ಅಧಿಸೂಚನೆ ಸಂ ಸಾರಿಇ 01 ಸಾಇಪ 2013,ದಿನಾಂಕ:18–01–2013.
3. ಸರ್ಕಾರದ ಅಧಿಸೂಚನೆ ಸಂ ಸಾರಿಇ 95 ಸಾಇಪ 2013,ದಿನಾಂಕ:23–08–2013.
4. ಸರ್ಕಾರದ ಅಧಿಸೂಚನೆ ಸಂಖ್ಯೆ: 709 ಪಿಜಿಸಿ 2018, ದಿನಾಂಕ:17–03–2018.
5. ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರು ಇವರು ಶಾಲಾ ಮಕ್ಕಳನ್ನು ಕರೆದೊಯ್ಯುವ ಖಾಸಗಿ ವಾಹನಗಳಿಗೆ ಕ್ಯಾಬ್ ಆಗಿ ನಿಬಂಧನೆಗಳೊಂದಿಗೆ ಪರಿವರ್ತಿಸಲು ಕರ್ನಾಟಕ ಸರ್ಕಾರವು ಅಧಿಸೂಚನೆ ಸಂ ಸಾರಿಇ 01 ಸಾಇಪ 2011, ದಿನಂಕ:18–01–2013ರಂದು ಜಾರಿಗೆ ತಂದಿರುತ್ತದೆ. ಸದರಿ ನಿಯಮವನ್ನು ಜಾರಿಗೆ ಬಂದಲ್ಲಿ ಕಾನೂನಿನ ತೊಡಕುಗಳಿಂದ ಖಾಸಗಿ ವಾಹನ ಹಾಗೂ ಮೋಟಾರ್ ಕ್ಯಾಬ್ ವಾಹನಗಳನ್ನು ಸ್ಕೂಲ್ ಕ್ಯಾಬ್ ಆಗಿ ಪರಿವರ್ತಿಸಲು ಸಾಧ್ಯವಾಗದ ಕಾರಣ ಉಲ್ಲೇಖ (2)ರ ಅಧಿಸೂಚನೆಯನ್ನು ಜಾರಿಗೆ ತಂದಿರುತ್ತದೆ.

ಆದರೆ, ಇದುವರೆಗೂ ಯಾವುದೇ ಶೈಕ್ಷಣಿಕ ಸಂಸ್ಥೆಯವರು ಶಾಲಾ ಮಕ್ಕಳ ಸುರಕ್ಷತೆ ಮತ್ತು ಪ್ರಯಾಣದ ಹಿತದೃಷ್ಟಿಯಿಂದ **"ಸ್ಕೂಲ್ ಕ್ಯಾಬ್ ಸೇಫ್ಟಿ ಕಮಿಟಿ "** ಯನ್ನು ಮಾಡದೇ ಇರುವುದರಿಂದ ಸದರಿ ಅಧಿಸೂಚನೆ ಜಾರಿಗೆ ಬಂದು 6 ವರ್ಷಗಳು ಆಗಿದ್ದರೂ ಯಾವುದೇ ಖಾಸಗಿ ಪ್ರವರ್ತಕರ ವಾಹನಗಳನ್ನು ರಾಜ್ಯದಲ್ಲಿ ಸ್ಕೂಲ್ ಕ್ಯಾಬ್ ಆಗಿ ನೋಂದಾಯಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದು ಗಮನಕ್ಕೆ ತರುತ್ತಾ ಈ ಬಗ್ಗೆ ಕರ್ನಾಟಕ ಮೋಟಾರು ವಾಹನಗಳ ನಿಯಮಗಳು 1989ಕ್ಕೆ ತಿದ್ದುಪಡಿ ತಂದು Conditions for vehicles engaged in transport of school children Rules 2012 ರ ನಿಯಮ, (4)ರಲ್ಲಿ ವಿಧಿಸಿರುವಂತೆ ಶಾಲಾ ಮುಖ್ಯಸ್ಥರುಗಳಿಗೆ ಕ್ರಮವಹಿಸಲು ಸೂಕ್ತ ನಿರ್ದೇಶನ ನೀಡಲು ತಿಳಿಸಿರುತ್ತಾರೆ. (ಪ್ರತಿ ಲಗತ್ತಿಸಿದೆ)

ಕರ್ನಾಟಕ ಮೋಟಾರು ವಾಹನಗಳ ನಿಯಮಗಳು 1989ಕ್ಕೆ ತಿದ್ದುಪಡಿ ತಂದು Conditions for vehicles engaged in transport of school children Rules 2012 ನ್ನು ಸರ್ಕಾರವು ಅಧಿಸೂಚನೆಯಲ್ಲಿ ಖಾಸಗಿ ಒಪ್ಪಂದ ವಾಹನಗಳಲ್ಲಿ ಶಾಲಾ ಮಕ್ಕಳಿಗೆ ಸಾರಿಗೆ ಸೌಲಭ್ಯ ಒದಗಿಸುವ ಸಲುವಾಗಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಸದರಿ ಅಧಿಸೂಚನೆಯ ಕ್ರಮಸಂಖ್ಯೆ(4) ರಲ್ಲಿ ಈ ಕೆಳಕಂಡಂತೆ ವ್ಯಾಖ್ಯಾನಿಸಲಾಗಿದೆ.

**4. School cabs Safety Committee:- In every school wherein school cab used as a means of transportation shall have a safety committee to look into the matters pertaining to safe transportation of School children, and transportation fee and -**

**identification of stops. The safety Committee should comprise parents and transporters representatives along with the school staff. The committee shall verify the validity of documents of the vehicle viz., Registration certificate, Certificate of fitness, Certificate of Insurance Permit, Emission Certificate, Driving License, Fire extinguisher, First aid kit, and ensure that all the safety measures have been adopted in the vehicle.**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಮೋಟಾರು ವಾಹನಗಳ ನಿಯಮಗಳು 1989ಕ್ಕೆ ತಿದ್ದುಪಡಿ ತಂದಿರುವಂತೆ Conditions for vehicles engaged in transport of school children Rules 2012 ರ ನಿಯಮ, (4)ರಲ್ಲಿ ವಿಧಿಸಿರುವಂತೆ ಶಾಲಾ ಮುಖ್ಯಸ್ಥರುಗಳು ಕಡ್ಡಾಯವಾಗಿ ಕ್ರಮವಹಿಸಲು ಮತ್ತು ಎಲ್ಲಾ ಶಾಲೆಗಳಲ್ಲಿ **"ಸ್ಕೂಲ್ ಕ್ಯಾಬ್ ಸೇಫ್ಟಿ ಕಮಿಟಿ"** ಯನ್ನು ರಚಿಸಲು ಸೂಚಿಸಲಾಗಿದೆ. ತಪ್ಪಿದಲ್ಲಿ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಬೇಕಿರುತ್ತದೆ.

ಈ ಬಗ್ಗೆ ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಇವರು ನಿಮ್ಮ ಆಡಳಿತ ವ್ಯಾಪ್ತಿಯ ಎಲ್ಲಾ ಶೈಕ್ಷಣಿಕ ಸಂಸ್ಥೆಯವರು ಶಾಲಾ ಮಕ್ಕಳ ಸುರಕ್ಷತೆ ಬಗ್ಗೆ ಪ್ರಯಾಣದ ಹಿತದೃಷ್ಟಿಯಿಂದ **"ಸ್ಕೂಲ್ ಕ್ಯಾಬ್ ಸೇಫ್ಟಿ ಕಮಿಟಿ"** ಯನ್ನು ಎಲ್ಲಾ ಶಾಲೆಗಳಲ್ಲಿ ದಿನಾಂಕ:14-08-2019ರ ಒಳಗಾಗಿ ರಚಿಸಿ, ಸಾರಿಗೆ ಇಲಾಖೆ ಆಯುಕ್ತರು ನೀಡಿರುವ ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ. ಈ ಬಗ್ಗೆ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಂದ ಮಾಹಿತಿ ಪಡೆದು ಕ್ರೋಢೀಕೃತ ಮಾಹಿತಿಯನ್ನು ದಿನಾಂಕ:20-08-2019ರ ಒಳಗಾಗಿ ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ.

[ಡಾ॥ ಕೆ.ಜಿ.ಜಗದೀಶ, ಭಾ.ಆ.ಸೇ]
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

26/7

ಗೆ,

**ರಾಜ್ಯದ ಎಲ್ಲಾ ಶಾಲಾ ಮುಖ್ಯಸ್ಥರುಗಳಿಗೆ,**
[ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ]

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ( ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ.
2. ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಸಾರಿಗೆ ಆಯುಕ್ತರ ಕಛೇರಿ, 1ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ, ಕೆ.ಎಚ್.ರಸ್ತೆ, ಶಾಂತಿನಗರ, ಬೆಂಗಳೂರು ಇವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ,
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ / ಕಲಬುರಗಿ ವಿಭಾಗ,
4. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಕಳುಹಿಸುತ್ತಾ ಸದರಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಎಲ್ಲಾ ಶಾಲಾ ಮುಖ್ಯಸ್ಥರುಗಳಿಗೆ ಸೂಕ್ತ ನಿರ್ದೇಶನ ನೀಡಲು ಪಾಲಿಸಲು ಅಗತ್ಯ ಕ್ರಮವಹಿಸಲು ಸೂಚಿಸಿದೆ.
5. ರಾಜ್ಯದ ಎಲ್ಲಾ ತಾಲ್ಲೂಕು / ವಲಯಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕಳುಹಿಸುತ್ತಾ ನಿಮ್ಮ ಆಡಳಿತ ವ್ಯಾಪ್ತಿಯ ಎಲ್ಲಾ ಶಾಲಾ ಮುಖ್ಯಸ್ಥರುಗಳಿಗೆ ಸದರಿ ಸುತ್ತೋಲೆಯನ್ನು ಕಳುಹಿಸಿ ಸುತ್ತೋಲೆಯಲ್ಲಿನ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಕ್ತ ಕ್ರಮವಹಿಸಲು ಸೂಚಿಸಿದೆ.
6. ಆಯುಕ್ತರ ಕಛೇರಿ, ಇ-ಆಡಳಿತ ವಿಭಾಗ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದಕ್ಕಾಗಿ.
7. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ
ಸಾರಿಗೆ ಇಲಾಖೆ

ಸಂ. ಸಾಆ/ಪ್ರವರ್ತನ-3/ವೈವ-75/19-20

ಸಾರಿಗೆ ಆಯುಕ್ತರ ಕಛೇರಿ,
1ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ,
ಕೆ.ಹೆಚ್. ರಸ್ತೆ, ಶಾಂತಿನಗರ,
ಬೆಂಗಳೂರು, ದಿ: 02-07-2019

ಇವರಿಗೆ,
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಆರ್.ಬಿ.ಐ ಹತ್ತಿರ, ನೃಪತುಂಗ ರಸ್ತೆ,
ಬೆಂಗಳೂರು.

ಮಾನ್ಯರೆ,

ವಿಷಯ: ಕರ್ನಾಟಕ ಸ್ಕೂಲ್ ಕ್ಯಾಬ್ ನಿಯಮಗಳ ಬಗ್ಗೆ.

ಉಲ್ಲೇಖ: 1. ಸರ್ಕಾರದ ಅಧಿಸೂಚನೆ ಸಂ ಸಾರಿಇ 01 ಸಾಇಪ 2011, ದಿನಾಂಕ: 18-01-2013.
2. ಸರ್ಕಾರದ ಅಧಿಸೂಚನೆ ಸಂ ಸಾರಿಇ 95 ಸಾಇಪ 2013, ದಿನಾಂಕ: 23-08-2013.
3. ಶ್ರೀ ಎಸ್ ಸುರೇಶ್‌ಕುಮಾರ್, ಶಾಸಕರು ಹಾಗೂ ಮಾಜಿ ಸಚಿವರು, ರಾಜಾಜಿನಗರ ವಿಧಾನಸಭಾ ಕ್ಷೇತ್ರ, ಬೆಂಗಳೂರು ಇವರ ಪತ್ರ ಸಂ: ಗೃಪ/108/2018-19, ದಿನಾಂಕ: 28-06-2019.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(3)ರ ಶಾಸಕರು ಹಾಗೂ ಮಾಜಿ ಸಚಿವರು, ರಾಜಾಜಿನಗರ ವಿಧಾನಸಭಾ ಕ್ಷೇತ್ರ, ಬೆಂಗಳೂರು ಇವರ ಪತ್ರದಲ್ಲಿ ಶಾಲಾ ಮಕ್ಕಳನ್ನು ಕರೆದೊಯ್ಯುವ ಖಾಸಗಿ ವಾಹನಗಳಿಗೆ ಕ್ಯಾಬ್ ಆಗಿ ನಿಬಂಧನೆಗಳೊಂದಿಗೆ ಪರಿವರ್ತಿಸಲು ಕರ್ನಾಟಕ ಸರ್ಕಾರವು ಅಧಿಸೂಚನೆ ಸಂ ಸಾರಿಇ 01 ಸಾಇಪ 2011 ದಿನಾಂಕ: 18-01-2013ರಂದು ಜಾರಿಗೆ ಬಂದಿರುತ್ತದೆ. ಸದರಿ ನಿಯಮವನ್ನು ಜಾರಿಗೆ ಬಂದಲ್ಲಿ ಕಾನೂನಿನ ತೊಡಕುಗಳಿಂದ ಖಾಸಗಿ ವಾಹನ ಹಾಗೂ ಮೋಟಾರ್ ಕ್ಯಾಬ್ ವಾಹನಗಳನ್ನು ಸ್ಕೂಲ್ ಕ್ಯಾಬ್ ಆಗಿ ಪರಿವರ್ತಿಸಲು ಸಾಧ್ಯವಾಗದಕಾರಣ, ಉಲ್ಲೇಖ (2)ರ ಸರ್ಕಾರದ ಅಧಿಸೂಚನೆಯನ್ನು ಜಾರಿಗೆ ತರಲಾಗಿರುತ್ತದೆ.

ಆದರೆ, ಇದುವರೆಗೂ ಯಾವುದೇ ಶೈಕ್ಷಣಿಕ ಸಂಸ್ಥೆಯವರು ಶಾಲಾ ಮಕ್ಕಳ ಸುರಕ್ಷತೆ ಪ್ರಯಾಣದ ಹಿತದೃಷ್ಟಿಯಿಂದ "ಸ್ಕೂಲ್ ಕ್ಯಾಬ್ ಸೇಪ್ಟಿ ಕಮಿಟಿ"ಯನ್ನು ಮಾಡದೇ ಇರುವುದರಿಂದ ಸದರಿ ಅಧಿಸೂಚನೆ ಜಾರಿಗೆ ಬಂದು 6 ವರ್ಷಗಳು ಆಗಿದ್ದರೂ ಯಾವುದೇ ಖಾಸಗಿ ಪ್ರವರ್ತಕರ ವಾಹನಗಳನ್ನು ರಾಜ್ಯದಲ್ಲಿ ಸ್ಕೂಲ್ ಕ್ಯಾಬ್ ಆಗಿ ನೋಂದಾಯಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದು ಗಮನಕ್ಕೆ ತರುತ್ತಾ ಈ ಬಗ್ಗೆ ಸೂಕ್ತ ಕಮ್ರ ವಹಿಸಲು ಕೋರಿರುತ್ತಾರೆ.

ಕರ್ನಾಟಕ ಮೋಟಾರು ವಾಹನಗಳ ನಿಯಮಗಳು 1989ಕ್ಕೆ ತಿದ್ದುಪಡಿ ತಂದು conditions for vehicles engaged in transport of school children Rules 2012ನ್ನು ಸರ್ಕಾರವು ಉಲ್ಲೇಖ (1)ರ ಅಧಿಸೂಚನೆಯಲ್ಲಿ ಖಾಸಗಿ ಒಪ್ಪಂದ ವಾಹನಗಳಲ್ಲಿ ಶಾಲಾ ಮಕ್ಕಳಿಗೆ ಸಾರಿಗೆ ಸೌಲಭ್ಯ ಒದಗಿಸುವ ಸಲುವಾಗಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಸದರಿ ಅಧಿಸೂಚನೆಯ ಕ್ರಮ ಸಂ.(4)ರಲ್ಲಿ ಈ ಕೆಳಕಂಡಂತೆ ವ್ಯಾಖ್ಯಾನಿಸಲಾಗಿದೆ:- (ಪ್ರತಿ ಲಗತ್ತಿಸಿದೆ)

--2

Scanned by CamScanner

**4. School cabs Safety Committee:-** In every school wherein school cab is used as a means of transportation shall have a safety committee to look into the matters pertaining to safe transportation of School children, and transportation fee and identification of bus stops. The Safety Committee should comprise parents and transporters representitives along with the school staff. The Committee shall verify the validity of documents of the vehicle viz., Registration Certificate, Certificate of fitness, Certificate of Insurance, Permit, Emission Certificate, Driving License, Fire extinguisher, First aid kit, and ensure that all the safety meansures have been adopted in the vehicle.

ಖಾಸಗಿ ಒಪ್ಪಂದ ವಾಹನಗಳಲ್ಲಿ ಶಾಲಾ ಮಕ್ಕಳಿಗೆ ಸಾರಿಗೆ ಸೌಲಭ್ಯ ಒದಗಿಸುವ ಖಾಸಗಿ ಪ್ರವರ್ತಕರ ಅನುಕೂಲಕ್ಕಾಗಿ ಉಲ್ಲೇಖ (2)ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆ 1957ರ, ಕಲಂ 16ರ ಪ್ರಕಾರ ಸದರಿ ವಾಹನಗಳಿಗೆ 50% ತೆರಿಗೆ ವಿನಾಯತಿಯನ್ನು ಷರತ್ತಿನೊಳಗೊಂಡು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಸದರಿ ಅಧಿಸೂಚನೆಯಲ್ಲಿ ಅಂಶ (ಅ)ರಲ್ಲಿ ಈ ಕೆಳಕಂಡಂತೆ ವ್ಯಾಖ್ಯಾನಿಸಲಾಗಿದೆ:- (ಪ್ರತಿ ಲಗತ್ತಿಸಿದೆ)

> "A confirmation letter from the school safety Committee Constitution accordance with Rule 4 of the said rule to the effect that the maxicab may be allowed to carry children belonging to that school shall produced to the Taxation authority".

ಆದ್ದರಿಂದ, ಉಲ್ಲೇಖ (3)ರ ಪತ್ರದ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸುತ್ತಾ, ಕರ್ನಾಟಕ ಮೋಟಾರು ವಾಹನಗಳ ನಿಯಮಗಳು 1989ಕ್ಕೆ ತಿದ್ದುಪಡಿ ತಂದು conditions for vehicles engaged in transport of school children Rules 2012ರ ನಿಯಮ, (4)ರಲ್ಲಿ ವಿಧಿಸಿರುವಂತೆ ಶಾಲಾ ಮುಖ್ಯಸ್ಥರುಗಳಿಗೆ ಕ್ರಮ ವಹಿಸಲು ಸೂಕ್ತ ನಿರ್ದೇಶನ ನೀಡಲು ಈ ಮೂಲಕ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

ಸಹಿ/-
ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ,
ಬೆಂಗಳೂರು.

ಪ್ರತಿಯನ್ನು: ಶ್ರೀ ಎಸ್ ಸುರೇಶ್‌ಕುಮಾರ್, ಶಾಸಕರು ಹಾಗೂ ಮಾಜಿ ಸಚಿವರು, ರಾಜಾಜಿನಗರ ವಿಧಾನಸಭಾ ಕ್ಷೇತ್ರ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.

o/c

ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ,
ಬೆಂಗಳೂರು.

Scanned by CamScanner